ಕಾನೂನನ್ನು ಮಾಡಬೇಕಾದರೆ ಎಲ್ಲರೂ ಕುಳಿತುಕೊಂಡು ವಿಚಾರ ಮಾಡಿ ಇದರ ಮೇಲೆ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಅದಕ್ಕಾಗಿ, ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿದರೆ ಒಳ್ಳೆಯದು. ಇದರಿಂದ ಏನೂ ತೊಂದರೆಯಾಗುವುದಿಲ್ಲ.

SRI M.C. NANAIAH :— Let us not delay the legislation. We should not delay the legislation.

ಶ್ರೀ ಕಾಗೋಡು ತಿಮ್ಮಪ್ಪ :— ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡುವುದರಿಂದ ಯಾರೂ ಸಹ ಅಳುವುದಿಲ್ಲ. ಯಾರೂ ಕೂಡ ಉಪವಾಸ ಮಾಡುವುದಿಲ್ಲ ಮತ್ತು ಇದರಿಂದ ಯಾರಿಗೂ ಕೂಡ ತೊಂದರೆಯಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾವು ಬಹಳ ಕಳಕಳಿಯಿಂದ ಆಡಳಿತ ಪಕ್ಷಕ್ಕೆ ಮನಮುಟ್ಟುವಂತೆ ತಿಳಿಸಿದ್ದೇವೆ. ಪ್ರಾಯಶಃ ಮಾನ್ಯ ನಾಣಯ್ಯನವರನ್ನು ಇದಕ್ಕೋಸ್ಕರವೇ ಸಂಪುಟದಲ್ಲಿಟುಕೊಂಡಿದ್ದಾರೆ. You will try to convince even the insensible thing. ಇದೊಂದು ಅನಗತ್ಯ, ಅನಪೇಕ್ಷಣೀಯವಾದ ಮಸೂದೆ ಮತ್ತು ಅನಧಿಕೃತ ಕಟ್ಟಡಕ್ಕೆ ಕುಮ್ಕಕ್ಕು ಕೊಡುವಂತಹ ಮಸೂದೆಯಾಗಿದೆ. ಹಾಗೆಯೇ ಆಡಳಿತ ಪಕ್ಷಕ್ಕೆ ಚುನಾವಣೆ ಫಂಡ್‌ಗೆ ದುಡ್ಡು ಸೇರಿಸುವಂಥ ಒಂದು ಮಸೂದೆಯಾಗಿದೆ. ಆದ್ದರಿಂದ, ನಾವೆಲ್ಲಾ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ :— ದೇಶಕ್ಕೆ ಬೆಂಕಿ ಹಾಕಿ ಹಣ ಮಾಡತಕ್ಕಂಥ ಜನ ನೀವು, ನಾವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಈ ಮಸೂದೆಯನ್ನು ನಾನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ. ಏಕೆಂದರೆ, ನಮ್ಮವರೂ ಕೂಡ ಇದರಲ್ಲಿ ಒಳ್ಳೆಯ ಸಲಹೆಗಳಿವೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಜಂಟಿ ಸದನ ಸಮಿತಿಗೆ ರೆಫರ್ ಮಾಡುವುದಕ್ಕೆ ಏನು ತೊಂದರೆ? ಭೂಸುಧಾರಣೆ ಮತ್ತು ಅರ್ಬನ್ ಸೀಲಿಂಗ್ ಪ್ರೈವೇಟ್ ಆಸ್ಪತ್ರೆಗಳ ಬಗ್ಗೆ ಆದನ್ನು ನಾವು ಸಮಿತಿಗೆ ರೆಫರ್ ಮಾಡುತ್ತೇವೆ. ಆದ್ದರಿಂದ, ಇದನ್ನು ಏಕೆ ಮಾಡಬಾರದು?

MR. SPEAKER :— They are not agreeable. ನಾನೇನು ಮಾಡುವುದು ನೀವೇ ಹೇಳಿ.

MR. MALLIKARJUNA KHARGE :— The government is not ready to refer it to the Joint Select Committee. They are not ready to discuss it fully. There is no other alternative. We protest and walk out.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :— ಪ್ರಸ್ತಾಪ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ-2ಕ್ಕೆ ತಿದ್ದುಪಡಿ

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಖಂಡ 2ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ.

"2ನೇ ಖಂಡದಲ್ಲಿ" (ii)ನೇ ಉಪಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

``(ii) "ಮಂಡಲ ಪಂಚಾಯಿತಿ" ಎಂಬ ಪದಗಳಿಗೆ "ಪಟ್ಟಣ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಅಧ್ಯಕ್ಷರು ಪ್ರಸ್ತಾಪ ಏನೆಂದರೆ, ``2ನೇ ಖಂಡದಲ್ಲಿ (ii) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:- ``(ii)"ಮಂಡಲ ಪಂಚಾಯಿತಿ" ಎಂಬ ಪದಗಳಿಗೆ "ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ" ಎಂಬ ಪದಗಳನ್ನು ನಿಯೋಜಿಸತಕ್ಕದ್ದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.